ಇನ್ನೊಂದು ಪೇಪರಿಟ್ಟು ಅದೇ ಬಂತು ಅನ್ನಿಸಿ ನಿಟ್ಟುಸಿರು ಬಿಟ್ಟೆವು.

ಆಯಿತು ಇದುವರೆಗೆ ಹೇಳಿದ್ದರಲ್ಲಿ ಒಂದು ಪೂಜೆ, ಆಚರಣೆಗೆ ಸಂಬಂಧಿಸಿದ್ದು. ಅದನ್ನ ಅಷ್ಟಕ್ಕೇ ಬಿಟ್ಟು ಬಿಡೋಣ. ಇನ್ನೊಂದು ಮಗುವಿಗೆ ಸಂಬಂಧಿಸಿದ್ದು. ಅದನ್ನೂ ಬಿಟ್ಟು ಬಿಡೋಣ. ಆದರೆ ದೊಡ್ಡವರೆಂಬ ದೊಡ್ಡವರೂ ಹೀಗೆ ಮಾಡಿದರೆ? ನೀವು ಒಂದು ಅಂಗಡಿಗೆ ಬ್ಯಾಗ್ ತರಬೇಕೆಂದು ಹೋಗುತ್ತೀರಿ ಎಂದಿಟ್ಟುಕೊಳ್ಳೋಣ. ಅದನ್ನು ಕೊಡುವಾಗ ಅವನು 'ನೀವು ಜೋಪಾನವಾಗಿ ನೋಡಿಕೊಳ್ಳಬೇಕು ಮತ್ತೆ. ಇದು ನನ್ನ ಮಗು... ಗೊತ್ತಾಯ್ತಾ?' ಎಂದರೆ ನೀವು ನಗದೇ ಇರುತ್ತೀರಾ? 'ಇವನಿಗೆಲ್ಲೋ ಸ್ವಲ್ಪ ಲೂಸು' ಅಂದುಕೊಳ್ತೀರಿ ಅಲ್ಲವಾ? ಅದಕ್ಕೇ ನೀವು ಐವತ್ತರ ದಶಕದಲ್ಲಿ ಹುಟ್ಟಲಿಲ್ಲ ಮತ್ತು ಸಂಗೀತ ಕಲಿಯಲಿಲ್ಲ. ವಿಷಯ ಏನೆಂದರೆ ಐವತ್ತರ ದಶಕದಲ್ಲಿ ಕೋಲ್ಕತ್ತದಲ್ಲಿ ವೀಣೆ, ಸಿತಾರ್ ಇತ್ಯಾದಿ ಸಂಗೀತ ಉಪಕರಣಗಳಿಗೆ ಆರ್ಡರ್ ಕೊಟ್ಟರೆ ಅಂಗಡಿಯವರು ಅವರ ಭುಜ, ಕೈ ಇತ್ಯಾದಿಗಳನ್ನು ಅಳೆದು ಅದಕ್ಕೆ ಹೊಂದುವಂತೆ ವಾದ್ಯ ತಯಾರಿಸುತ್ತಿದ್ದರು. ಅಷ್ಟೇ ಅಲ್ಲ ವಾದ್ಯದ 'ಅಂಶ ಕುಂಡಲಿ' ಬರೆಯುತ್ತಿದ್ದರು. ನಿಮ್ಮ ಕುಂಡಲಿಗೂ ವೀಣೆಯ ಜಾತಕಕ್ಕೂ ಸರಿ ಬಂದರೆ ಮಾತ್ರ ಕೊಡ್ತೀವಿ, ಇಲ್ಲಾಂದರೆ ಇಲ್ಲ ಅಂತ ಮುಲಾಜಿಲ್ಲದೆ ಹೇಳುತ್ತಿದ್ದರು. ಏನು ವಿಚಿತ್ರ! ಒಂದು ವಸ್ತುವಿಗೂ ಜಾತಕವನ್ನು ಶ್ರದ್ಧೆಯಿಂದ ಬರೆಯುತ್ತಿದ್ದ ಆ ಕಾಲದ ಮನಃಸ್ಥಿತಿ ಹೇಗಿರಬಹುದು? ರಿಪೇರಿಗಾಗಿ ಅದನ್ನು ವಾಪಸ್ ತಗೊಂಡು ಹೋದರೆ 'ನನ್ನ ಮಗಳು ತವರು ಮನೆಗೆ ಬಂದಂತಾಯ್ತು, ಹೇಗಿದ್ದಾಳೆ?' ಅಂತ ಅದನ್ನು ನೇವರಿಸಿ ಸಂಭ್ರಮಿಸುತ್ತಿದ್ದರು. ಆದಷ್ಟು ಮಗಳು ತವರು ಮನೆಗೆ ಬರದಿದ್ದರೆ ಒಳ್ಳೆಯದು ಅಂತ ಯೋಚನೆ ಮಾಡೋ ಈ ಕಾಲದಲ್ಲಿ ಇದೆಲ್ಲ ಜನರಿಗೆ ಹೇಗೆ ಅರ್ಥವಾಗುತ್ತೆ? ಬಟ್ಟೆ ಅಂಗಡಿಗೆ ಹೋದರೆ ಸಾಕು, ಇದು ನಿಮಗೆ ಒಪ್ಪುತ್ತೆ, ಇದು ನಿಮಗಾಗೇ ಮಾಡಿಸಿದ ಹಾಗಿದೆ, ಈ ಕಲರ್‌ಗೂ ನಿಮಗೂ ಸಕತ್ ಮ್ಯಾಚಿಂಗ್, ನಿಮಗೆ 42 ಇಂಚೂ ಆಗುತ್ತೆ, ನಲವತ್ತನಾಲ್ಕೂ ಆಗುತ್ತೆ, ನೀವು ಭಾರೀ ಫ್ಲೆಕ್ಸಿಬಲ್ ಸಾರ್ ಅಂತ ಟೋಪಿ ಹಾಕುವ ವ್ಯಾಪಾರಿ ಕಲೆಗೂ ನಿಮ್ಮ ಜಾತಕ ಹೊಂದಲಿಲ್ಲ ಅಂದ್ರೆ ಕೊಡೋಲ್ಲ ಅನ್ನುತ್ತಿದ್ದ ಆ ಕಲಾಬದ್ಧತೆಗೂ ಎಲ್ಲಿಂದೆಲ್ಲಿಯ ಸಂಬಂಧ? ಹಾಗಂತ ಈಗ ಜಾತಕ ಬರೆಯುತ್ತ ಕೂತುಕೊಂಡ್ರೆ ಬಿಗ್ ಬಜಾರ್ ಹೆಸರನ್ನು ಬಿಗ್ ಜ್ಯೋತಿಷ್ಯಾಲಯ ಅಂತ ಬದಲಾಯಿಸಬೇಕಾದೀತು. ಅದೆಲ್ಲ ತರ್ಕ ಬೇಡ. ಎಲ್ಲದರಲ್ಲೂ ಮನಸ್ಸು ಭಾವನೆಗೆ ಜಾಗ ಹುಡುಕುತ್ತಿದ್ದ ಅಂದಿನ ಮನಃಸ್ಥಿತಿ ದೊಡ್ಡದು ಅಂತ ಒಪ್ಪಿಕೊಂಡರೂ ಸಾಕು ಈಗಿನ ಕಾಲದ ಶುಷ್ಕ ಬದುಕು ಸ್ವಲ್ಪ ಚೇತರಿಸಿಕೊಳ್ಳಬಹುದು ಅಲ್ಲವೇ? ಹಾಗಂತ ಈಗ ಜಾತಕ ಬರಿಯೋದೂ ಕಷ್ಟ. ಪದಾರ್ಥ ಕೊಡಯ್ಯಾ ಅಂದ್ರೆ ಜಾತಕ ಬರೀತೀಯಲ್ಲಯ್ಯಾ ಇದು ಜೀವ ವಿರೋಧೀ ಕೆಲಸ, ಮೌಢ್ಯ, ಕಲಾಕ್ಷೇತ್ರದ ಮಡಿವಂತಿಕೆ ಅಂತ ಏನೆಲ್ಲ ಶುರುವಾಗುವ ಕಾಲವಿದು. ಹೋಗಲಿ ಬಿಡಿ. ಅದೆಲ್ಲ ಮಾತಾಡುವುದು ಬೇಡ. ನಿಮಗೆ ಗೊತ್ತಿದೆ ಇದು ಕಡಿತ ಮಾರಾಟ, ಜಾಸ್ತಿ ಮಾರಾಟದ ಕಾಲ. ನೀವು ಏನು ತಗೊಂಡರೂ ನೂರು ಗ್ರಾಂ ಹೆಚ್ಚು ಕೊಡುವ ಕಾಲ. ನೀವು ಏಳು ಸ್ವರದ ವೀಣೆ ತೊಗೊಂಡರೆ ಇನ್ನೂ ಮೂರು ಸ್ವರ ಹೆಚ್ಚಿಗೆ ಕೊಡಲಾಗುವುದು ಅಂತ ಯಾರಾದರೂ ಬೋರ್ಡ್ ಹಾಕಿಬಿಡಬಹುದು! ದುಡ್ಡು ಕಡಿಮೆ ಇದ್ದಲ್ಲಿ ಯೋಚಿಸಬೇಡಿ, ನಾಕೇ ಸ್ವರದ ವೀಣೆಯೂ ಸಿಗುವುದು ಎಂದು ಬಿಡಬಹುದು. ಅಲ್ಲಾ ಕ್ರಿಕೆಟ್‌ನ 50 ಓವರ್ ಮ್ಯಾಚನ್ನ 20 ಓವರ್‌ಗೆ ಇಳಿಸಬಹುದಾದರೆ ಏಳು ಸ್ವರದ ಸಂಗೀತಾನ ನಾಲ್ಕು ಸ್ವರಕ್ಕೆ ಇಳಿಸಲಾಗುವುದಿಲ್ಲವೇ?

ಬೇಡ ಬೇಡ, ಅನಗತ್ಯ ವಿಚಾರಗಳನ್ನು ಜಾಸ್ತಿ ಉದ್ದ ಮಾಡಬಾರದು. ಈಗ ಒಂದು ಮಟ್ಟಕ್ಕೆ ವಸ್ತುವಿನಲ್ಲೂ ಜೀವವಿರಬಹುದು ಅಥವ ಹಾಗೆಂದು ಭಾವಿಸಬಹುದು ಅನ್ನುವುದನ್ನು ಒಪ್ಪಿಕೊಳ್ಳುವ ಹಂತಕ್ಕೆ ಬರುತ್ತಿದ್ದೇವೆ. ಸಾಧನ, ಸಲಕರಣೆಗಳಿಗೆ ಜೀವವನ್ನು ಆರೋಪಿಸುವುದರಿಂದ